# ಮೈಗಂಟಿದ ಬಟ್ಟೆ ಕಾಣದು ಹೊಟ್ಟೆ

**ಕಳೆದ ಹದಿನೈದು ವರ್ಷಗಳಿಂದ ಜಾಗತಿಕ ಅಂಗಿ ಮಾರುಕಟ್ಟೆಯನ್ನು ಆವರಿಸಿಕೊಂಡಿರುವ ಸ್ಲಿಮ್ ಫಿಟ್ ಶರ್ಟ್‌ಗಳ ವಿಷಯ ಅಧ್ಯಯನಯೋಗ್ಯ. ಬೊಜ್ಜನ್ನೂ ಮರೆಮಾಚಿ, ಸ್ಲಿಮ್ ಆಗಿ ಕಾಣುವಂತೆ ಮಾಡಬಲ್ಲ ಇಂತಹ ಅಂಗಿಗಳಿಗೆ ಈಗ ಎಲ್ಲೆಲ್ಲೂ ಬೇಡಿಕೆ.**

■ ಎನ್ವಿ



ಒಂದು ಕಾಲವಿತ್ತು. ಟೈಲರ್ ಸ್ವಲ್ಪ ಸಮಯ ನಮ್ಮನ್ನು ಟ್ರಾಫಿಕ್ ಪೊಲೀಸ್ ರೀತಿ ಕೈಗಳನ್ನು ಹಿಡಿದುಕೊಳ್ಳುವಂತೆ ಮಾಡಿ, ಬಟ್ಟೆ ಹೊಲಿಯಲು ಅಳತೆ ತೆಗೆದುಕೊಳ್ಳುತ್ತಿದ್ದರು. 'ಇಷ್ಟು ಸಾಕಾ' ಎಂದು ಟೈಲರ್ ಕೇಳಿಕೊಂಡು, ನಮ್ಮ ಅನುಕೂಲಕ್ಕೆ ತಕ್ಕ ಅಳತೆಯಲ್ಲಿ ಅಂಗಿ ಹೊಲಿದುಕೊಡುತ್ತಿದ್ದರು. ಆಯಾ ಕಾಲಘಟ್ಟದ ಟ್ರೆಂಡ್‌ಗೆ ತಕ್ಕಂತೆ ಅಂಗಿ ಹೊಲಿಯುವ ಪರಿಪಾಟ ಇತ್ತು. ಒಂದೂವರೆ ದಶಕದಿಂದ 'ಸ್ಲಿಮ್ ಫಿಟ್' ಎಂಬ ಪ್ರಭೇದವೊಂದು ಅಂಗಿ ಮಾರುಕಟ್ಟೆಯನ್ನು ನಿಧನಿಧಾನವಾಗಿ ಆವರಿಸಿಕೊಳ್ಳತೊಡಗಿತು. ಅಂತಹ ಅಳತೆಗೆ ಬಟ್ಟೆ ಹೊಲಿದುಕೊಡುವುದು ಟೈಲರ್‌ಗಳಿಗಂತೂ ಬಲು ಕಷ್ಟ.

'ಬಾಡಿಗಾರ್ಡ್' ಹಿಂದಿ ಸಿನಿಮಾದಲ್ಲಿ ಸಲ್ಮಾನ್ ಖಾನ್ ಹಾಕುವ ಅಂಗಿಯು ಅವರ ವಕ್ಷಸ್ಥಳದ ಆಕಾರವನ್ನು ಎದ್ದುಕಾಣಿಸುವ ರೀತಿ ಇತ್ತು. 'ಸಿಂಗಂ' ಸಿನಿಮಾದಲ್ಲಿ ಸೂರ್ಯ (ತಮಿಳಿನಲ್ಲಿ) ಹಾಗೂ ಅಜಯ್ ದೇವಗನ್ (ಹಿಂದಿಯಲ್ಲಿ) ಇಬ್ಬರ ಪೊಲೀಸ್ ಯೂನಿಫಾರ್ಮ್‌ಗಳೂ ಸ್ಲಿಮ್ ಫಿಟ್. ಮೈಗಂಟಿದ ಬಟ್ಟೆ ಧರಿಸಿಯೇ ಅವರು ಹೊಡೆದಾಡುವುದನ್ನು ಕಂಡು, ಅಂಗಿಯ ಕ್ಷಮತೆಯ ಕುರಿತು ಮಾತನಾಡಿಕೊಂಡವರೆಷ್ಟೋ.

2015ರಲ್ಲಿ ವಾಷಿಂಗ್ಟನ್ ಪೋಸ್ಟ್ ಪತ್ರಿಕೆಯಲ್ಲಿ ಲೇಖಕ ಜಾನ್ ಕೆಲ್ಲಿ ಮನರಂಜನಾತ್ಮಕ ಶೈಲಿಯಲ್ಲಿ ಸ್ಲಿಮ್ ಫಿಟ್ ಅಂಗಿಗಳ ಬಗೆಗೆ ಒಂದು ಲೇಖನ ಬರೆದರು. ಅದರ ಸಾರಾಂಶ ಮಜವಾಗಿದೆ: 'ನನ್ನ ವಾರ್ಡ್‌ರೋಬ್‌ನಲ್ಲಿ ಇರುವ ಹಸಿರು ಅಂಗಿಯನ್ನು ಕಂಡರೆ ನನಗೆ ನಗು ಬರುತ್ತದೆ. ಅದು ನನ್ನ ಸಂಗ್ರಹದಲ್ಲೇ ನನಗೆ ಆಗದಂತಹ ಅಂಗಿ. ಒಂದೊಮ್ಮೆ ಬಟ್ಟೆ ಕೊಳ್ಳಲು ಮಳಿಗೆಗೆ ಹೋಗಿದ್ದವನು ಟ್ರಯಲ್ ನೋಡದೆ ಅದನ್ನು ಕೊಂಡುತಂದೆ. ಅಳತೆಯೇನೋ ನನಗೆ ಹೊಂದುವಂತಹದ್ದೇ. ಆದರೆ, ಅದರ ಟ್ಯಾಗ್ ಮೇಲೆ ಸ್ಲಿಮ್ ಫಿಟ್ ಎಂದು ಬರೆದಿದ್ದನ್ನು ಓದಿರಲಿಲ್ಲ. ಮನೆಗೆ ಬಂದು ಅದನ್ನು ಹಾಕಿಕೊಳ್ಳಲು ಯತ್ನಿಸಿದರೆ ಉಸಿರುಗಟ್ಟಿತು. ವರ್ಷಗಳ ಕಾಲ ಚೀಸ್, ಫ್ರೆಂಚ್‌ಫ್ರೈಸ್, ಮಾಂಸಾಹಾರಗಳಿಂದ ತಣಿಸಿದ್ದ ನನ್ನ ಸುಖೀ ಹೊಟ್ಟೆಯನ್ನು ಒಳಗೆ ಎಳೆದುಕೊಂಡು, ಆ ಅಂಗಿ ಹಾಕಿಕೊಳ್ಳುವುದು ಕಷ್ಟವೆನಿಸಿತು. ಕೊನೆಗೆ ಅದನ್ನು ನನ್ನ ವಿಚಿತ್ರ ಅನುಭವದ ನೆನಪಾಗಿ ಹಾಗೇ ಇಟ್ಟುಕೊಳ್ಳೋಣ ಎಂದು ನಿರ್ಧರಿಸಿದೆ. ಅದನ್ನು ಬದಲಿಸಿ, ಬೇರೆ ಒಂದು ಅಂಗಿ ತರಲಿಲ್ಲ. ಅಮೆರಿಕದಲ್ಲಿ 20 ವರ್ಷ ದಾಟಿದ ಬಹುಸಂಖ್ಯಾತರು ದಢೂತಿಗಳು. ಅವರೆಲ್ಲರಿಗೆ ಇಂತಹ ಅಂಗಿಗಳು ಅದು ಹೇಗೆ ಒಪ್ಪುತ್ತವೋ?'

ವ್ಯಾನ್ ಹ್ಯುಸೆನ್, ಕ್ಯಾಲ್ವಿನ್ ಕ್ಲೀನ್, ಟಾಮಿ ಹಿಲ್‌ಫಿಗರ್ ಹಾಗೂ ಆರೊ ಬ್ರಾಂಡ್‌ಗಳ ಅಂಗಿಗಳನ್ನು ತಯಾರಿಸುವ ಪಿವಿಎಚ್ ಕಾರ್ಪೊರೇಷನ್‌ನ ಅಧ್ಯಕ್ಷ ಡೇವಿಡ್ ಸರ್ಕಿನ್ ಅವರನ್ನು ಕೂಡ ಜಾನ್ ಕೆಲ್ಲಿ ಮಾತನಾಡಿಸಿದ್ದರು. ಕೆಲವು ವರ್ಷಗಳ ಹಿಂದೆ ಮಾರುಕಟ್ಟೆಯಲ್ಲಿ ಸ್ಲಿಮ್ ಫಿಟ್ ಅಂಗಿಗಳು ಕೆಲವಷ್ಟೆ ಇದ್ದವು. ಆದರೆ, ಹೊಸ ತಲೆಮಾರಿನವರಿಗೆ ತಮ್ಮ ದೇಹದ ಬೊಜ್ಜು ತೋರಿಸದಂತಹ ಉಡುಪಿನ ಮೇಲೆ ಒಲವು ಹೆಚ್ಚಾದದ್ದೇ ಮಾರುಕಟ್ಟೆಯಲ್ಲಿ ಅಂತಹ ಬಗೆಯ ಅಂಗಿಗಳು ವ್ಯಾಪಕವಾಗತೊಡಗಿದವು ಎಂದು ಡೇವಿಡ್ ಸರ್ಕಿನ್ ಹೇಳಿದ್ದರು.

ಒಂದು ಕಾಲದಲ್ಲಿ ಅಂಗಿ ದೊಗಳೆಯಾಗಿಯೇ ಇರುತ್ತಿತ್ತು. ಅದನ್ನು ಇಂಗ್ಲಿಷ್‌ನಲ್ಲಿ 'ಬ್ಯಾಗಿ' ಎಂದು